ಜಾಣರ ಪೆಟ್ಟಿಗೆ

ವಾರದ ಪತ್ರ

## ಸಂಗೀತ ಬರುತ್ತಲೇ ಇರಲಿ

ಈಗಾಗಲೇ ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಧಾರಾವಾಹಿಗಳು ಚಿತ್ರೀಕರಣವಾಗದ ಹಿನ್ನೆಲೆಯಲ್ಲಿ ಕಲರ್ಸ್ ಕನ್ನಡದಂತಹ ಸದಭಿರುಚಿಯ ವಾಹಿನಿ ಮತ್ತೆ ಹಳೇ ಧಾರಾವಾಹಿಗಳನ್ನು ಮರುಪ್ರಸಾರ ಮಾಡುವ ಬದಲು ಸಂಗೀತಾ ಕಾರ್ಯಕ್ರಮಗಳಿಗೆ ಆದ್ಯತೆ ಕೊಡಲಿ.

ಈ ಹಿಂದೆ ಜನಪ್ರಿಯಗೊಂಡ ಎಸ್‌ಪಿಬಿಯವರ 'ಎದೆ ತುಂಬಿ ಹಾಡುವೆನು' ಹಾಗೂ ರವಿ ಬೆಳಗೆರೆ ನೆಡೆಸಿಕೊಟ್ಟ 'ಎಂದು ಮರೆಯದ ಹಾಡು' ಮತ್ತೆ ಪ್ರಸಾರ ಮಾಡಿದರೆ ಕೊರೊನಾ ಆತಂಕದ ದಿನಗಳಲಿ ಸುಮಧುರ ಸಂಗೀತಗಳು ನೋಡುಗರ ಮನಸಿಗೆ ನೆಮ್ಮದಿ ಸಿಕ್ಕಂತಾಗುತ್ತದೆ. ದಯವಿಟ್ಟು ಸಂಬಂಧಪಟ್ಟ ವಾಹಿನಿಯವರು ಗಮನಿಸಿದರೆ ಒಳ್ಳೆಯದು.

–ರಾಮಚಂದ್ರ, ಕೊಪ್ಪಲು

## 'ಲೈಫ್ ಓಕೆ' ಅಸಂಬದ್ಧ ನಿರ್ವಹಣೆ

'ಸಿರಿಗನ್ನಡ' ಚಾನೆಲ್‌ನಲ್ಲಿ ಮುರುಳಿ ಹಾಗೂ ಹುಚ್ಚ ವೆಂಕಟ್ ಜಂಟಿಯಾಗಿ ನೆಡೆಸಿಕೊಡುವ 'ಲೈಫ್ ಓಕೆ' ಕಾರ್ಯಕ್ರಮ ಅಸಂಬದ್ಧತೆಯಿಂದ ಕೂಡಿದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ವ್ಯಕ್ತಿಗಳೊಂದಿಗೆ ಅವರ ನೊವು ನಲಿವುಗಳನ್ನು ಪರಿಚಯಿಸುವುದು ಈ ಕಾರ್ಯಕ್ರಮದ ಉದ್ದೇಶ.

ಆದರೆ, ನಿರ್ವಹಣೆಯಲ್ಲಿ ಗಂಭೀರತೆಯಿಲ್ಲ, ವಿಷಯದ ಆಳ ಅಗಲದ ಅರಿವೇ ಇಲ್ಲದೆ ಇಡೀ ಕಾರ್ಯಕ್ರಮದ ಉದ್ದೇಶ ಒಂದು ರೀತಿಯಲ್ಲಿ ಅಣುಕು ಪ್ರಹಸನದ ರೀತಿ ಕಾಣಿಸುತ್ತದೆ. ಉತ್ತರ ಕರ್ನಾಟಕದ ಭಾಗದಲ್ಲಿ ಚಾಲ್ತಿಯಲ್ಲಿರುವ ದೇವದಾಸಿ ಪದ್ಧತಿ ಸಮಸ್ಯೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಶ್ಲಾಘನೀಯ. ನಿರೂಪಕ ಮುರಳಿಯವರು ಒಗ್ಗರಣೆ ಡಬ್ಬಿ ಗುಂಗಿನಿಂದ ಹೊರಬರಲು ಸಾಧ್ಯವಿಲ್ಲ ಎಂಬುದನ್ನು ನಿರೂಪಿಸಿದ್ದಾರೆ. ಇನ್ನು ವೆಂಕಟ್ ಅವರ ಉಪಸ್ಥಿತಿ ಕಾರ್ಯಕ್ರಮಕ್ಕೆ ಯಾವ ರೀತಿಯಲ್ಲೂ ಪೂರಕ ಎಂದು ನನಗೆ ಅನಿಸಿಲ್ಲ. ಜಂಟಿ ಸಂದರ್ಶನ ಕಾರ್ಯಕ್ರಮವಾಗಿದ್ದರೂ, ಅವರಿಂದ ಯಾವುದೇ ಪೂರಕ ಪ್ರಶ್ನೆ–ಸಲಹೆಗಳು ಗಮನಕ್ಕೆ ಬಂದಿಲ್ಲ.

–ಶಿವಮೊಗ್ಗ ರಮೇಶ್, ಮೈಸೂರು

## ರಿಮೋಟ್- ಟೀವಿ ನಮ್ಮದೇ!

ಒಬ್ಬ ಮನುಷ್ಯ ಎಷ್ಟು ಅಲ್ಪತೃಪ್ತನಾಗಿ ಬದುಕಬಹುದು ಎಂಬುದನ್ನು ಈ ದಿನಗಳು ತಿಳಿಸಿಕೊಟ್ಟಿವೆ. ಜೊತೆಗೆ ಜನಪ್ರತಿನಿಧಿಗಳಿಂದ ಹಿಡಿದು ಯಾವೊಬ್ಬನ ಕೈಯಲ್ಲೂ ಇಂಥ ಭೀಕರ ಸನ್ನಿವೇಶವನ್ನು ಎದುರಿಸಿ ನಿಲ್ಲುವ ಶಕ್ತಿ ಇಲ್ಲ ಎನ್ನುವ ಸತ್ಯವೂ ಗೊತ್ತಾಗಿದೆ.

ಕಳೆದ ವಾರದಿಂದ ಕರ್ಫ್ಯೂ ಜಾರಿಯಾದ ಮೇಲಂತೂ, ರಿಯಾಲಿಟಿ ಶೋಗಳು, ಧಾರಾವಾಹಿಗಳೂ ಕೊರೊನಾ ಭೀಕರತೆಯನ್ನೇ ಬಂಡವಾಳ ಮಾಡಿಕೊಂಡಿದ್ದು ತೀರಾ ಶೋಚನೀಯ. ಇನ್ನು ಎಲ್ಲದಕ್ಕೂ ಕಪ್ಪು ಚುಕ್ಕೆ ಇಟ್ಟಂತೆ ದಿನ ಪೂರ್ತಿ ಬೊಬ್ಬೆ ಹೊಡೆಯುವ ಸುದ್ದಿ ವಾಹಿನಿಗಳ ಗುಣ ಮಟ್ಟವಂತೂ ಹೇಳಲಾಗದು. ಅನವಶ್ಯಕವಾಗಿ ಭಯ ಹುಟ್ಟಿಸುವ ಸಾವು ನೋವಿನ ವೈಭವೀಕರಣ ಮಾಡಿ ಮನಸ್ಸನ್ನು ಘಾಸಿಗೊಳಿಸುತ್ತಿದ್ದಾರೆ ಎಂದೆನಿಸುತ್ತದೆ.

ರಿಮೋಟ್ ನಮ್ಮ ಕೈಯಲ್ಲಿಯೇ ಇದೆಯಲ್ಲ ಅಂತಾ ಬೇರೆ ಯಾವುದೇ ಚಾನೆಲ್‌ಗಳನ್ನು ಒತ್ತಿದರೂ ಅಲ್ಲೂ ನಾವು ದಿನ ಪೂರ್ತಿ ಮನೆ ಮುರುಕ ಧಾರಾವಾಹಿಗಳನ್ನೇ ನೋಡಬೇಕಾಗುತ್ತದೆ. ಕನ್ನಡ ಸಿನಿಮಾಗಳು ಮರು ಪ್ರಸಾರವೇ ಆಗುತ್ತಿವೆ. ಹಾಗೆಂದು ಕನ್ನಡದ ಯಾವ ಚಾನಲ್ ನೋಡುವುದು.

–ಆರ್. ವೀರೇಶ್ ಕುಮಾರ್, ಬೆಂಗಳೂರು

## ರಂಜನೆಗೆ ಒತ್ತು ನೀಡಿ, ಪ್ಲೀಸ್

ಲಾಕ್‌ಡೌನ್ ಬಹುತೇಕರನ್ನು ಮನೆಯೊಳಗೆ ಸೆರೆಯಾಳನ್ನಾಗಿ ಮಾಡಿದೆ. ಎಳೆಯ ಮಕ್ಕಳೂ ಒಳಗೊಂಡಂತೆ ಹಿರಿಯ ನಾಗರಿಕರಿಗೂ ಟಿ.ವಿ ವೀಕ್ಷಣೆಯೇ ಪ್ರಮುಖ ಮನರಂಜನೆ. 24 ತಾಸು ಬಿತ್ತರವಾಗುವ ವಾರ್ತೆಗಳಲ್ಲಿ ನಕಾರಾತ್ಮಕ ಸಮಾಚಾರಗಳನ್ನೇ ಹೆಚ್ಚು ಬಿತ್ತರಿಸಲಾಗುತ್ತಿದೆ. ಬಹುತೇಕ ಧಾರಾವಾಹಿಗಳ ಹೂರಣ ಅನಾಚಾರದ ವೈಭವೀಕರಣ, ವ್ಯಭಿಚಾರ, ಮೂದಲಿಕೆ, ಮಾನಸಿಕ ಕ್ಷೋಭೆ ಉಂಟು ಮಾಡುವ ಸಂಭಾಷಣೆ, ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟುವುದೇ ಆಗಿರುತ್ತದೆ.

ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಎಡಬಿಡದೇ ಕಾಡುತ್ತಿರುವ ಕೊರೊನಾ ಕಾರಣದಿಂದ ಅನೇಕರ ಮನಸ್ಸುಗಳು ಒತ್ತಡಕ್ಕೆ ಸಿಲುಕಿವೆ. ಮುಂದಿನ ದಾರಿ ಕಾಣದಾಗಿರುವುದನ್ನು ನಿರಾಕರಿಸುವಂತಿಲ್ಲ. ಅನೇಕರು ಇಹಲೋಕ ತ್ಯಜಿಸಿದ್ದು ಅಂತಹ ಕುಟುಂಬಗಳ ಪಾಡು ಹೇಳತೀರದು. ಈ ಎಲ್ಲ ಆಗು–ಹೋಗುಗಳು ಸಮಾಜದಲ್ಲಿ ಹೊಸದೇನಲ್ಲ. ವಾಸ್ತವ ಹೀಗಿರುವಾಗ ಧಾರಾವಾಹಿಗಳ ನಿರ್ಮಾಪಕರು, ನಿರ್ದೇಶಕರು–ವೀಕ್ಷಕರ, ಸಾರ್ವಜನಿಕರ ಮನಸ್ಸಿಗೆ ಮುದ ನೀಡುವ, ಹುಮ್ಮಸ್ಸು ತುಂಬುವ, ಬದಲಾವಣೆ ತರುವ ಧಾರಾವಾಹಿಗಳನ್ನು ಬಿತ್ತರಿಸಿದರೆ ಗೃಹ ಬಂಧನದೊಳಿರುವ ಮಂದಿಗೆ ಕೊಂಚವಾದರೂ ನೆಮ್ಮದಿ ಸಿಕ್ಕೀತು. ಸಮಾಜದ ಸ್ವಾಸ್ಥ್ಯದ ಜವಾಬ್ದಾರಿಯನ್ನು ಪ್ರತಿಯೊಬ್ಬರೂ ಪರೋಕ್ಷವಾಗಿ ಹೊರಬೇಕಾಗುತ್ತೆ.

–ರಾಜೀವ್ ಎನ್. ಮಾಗಲ್, ಸಕಲೇಶಪುರ

## ಪ್ರಶ್ನೆ ದೋಷ




'ಥಟ್ ಅಂತ ಹೇಳಿ' ಕಾರ್ಯಕ್ರಮದ ಒಂದು ಪ್ರಶ್ನೆಯಲ್ಲಿ ಒಟ್ಟು ಆರು ಅಕ್ಷರಗಳಿರುತ್ತವೆ. ಈ ಆರೂ ಅಕ್ಷರಗಳನ್ನು ಉಪಯೋಗಿಸಿಕೊಂಡು ಮೂರು ಪದಗಳನ್ನು ರೂಪಿಸಬೇಕಾಗುತ್ತದೆ. ಎಡದಿಂದ ಬಲಕ್ಕೆ ಮತ್ತು ಮೇಲಿನಿಂದ ಕೆಳಕ್ಕೆ ಏಕರೂಪವಾಗಿರಬೇಕು. ಆದರೆ, ಪ್ರಶ್ನೆಯಲ್ಲಿ 'ವ' ಎನ್ನುವ ಅಕ್ಷರವೇ ಇಲ್ಲ. ಅಂದರೆ ಉತ್ತರ ನಿಖರವಾಗಿಲ್ಲ. ಪ್ರಶ್ನೆಯೇ ತಪ್ಪಾಗಿದೆಯಲ್ಲ.

–ಶ್ರೀಧರ್, ಬೆಂಗಳೂರು

## ಹಿಡಿಸಿದ ಧಾರಾವಾಹಿ

ನಾವು ತಪ್ಪದೆ ನೋಡುತ್ತಿರುವ ಎರಡು ಧಾರಾವಾಹಿಗಳೆಂದರೆ 'ಮಿಥುನ ರಾಶಿ' ಮತ್ತು 'ನಮ್ಮನೆ ಯುವರಾಣಿ' ಹೊಸ ಕಲಾವಿದರೇ ಅಭಿನಯಿಸುತ್ತಿರುವ ಈ ಧಾರಾವಾಹಿಗಳು ನಿಜಕ್ಕೂ ಉತ್ತಮವಾಗಿ ಬರುತ್ತಿವೆ. ಎಲ್ಲ ಪಾತ್ರಧಾರಿಗಳ ಅಭಿನಯ ಮೆಚ್ಚುವಂತಹದು. ಮುಖ್ಯವಾಗಿ ಮಿಥುನ್, ರಾಶಿ, ಸಮರ್ಥ್, ಅನುರಾಧ ಹಾಗು ಮೀರಾ, ಸಾಕೇತ್, ಅನಿಕೇತ್, ಅಹಲ್ಯಾ ಪಾತ್ರಧಾರಿಗಳು ಹೊಗಳಿಕೆಗೆ ಅರ್ಹರು (ಅನಿಕೇತ್ ಅವರ ಅಕಾರದ ಉಚ್ಚಾರಣೆ ಹೊರತು).

–ನಾ.ಸು. ನಾಗರಾಜ್, ಬೆಂಗಳೂರು

## ಹೀಗೂ ಉಂಟೇ?

ಕಲರ್ಸ್‌ನ 'ಕನ್ನಡತಿ'ಯಲ್ಲಿ ಭುವಿ ತಂಗಿ ಬಿಂದು ವರೂಧಿನಿಗೆ ತನ್ನನ್ನು ಅವಳು ಹೋಗುವ ದಾರಿಯಲ್ಲಿ ಬಿಟ್ಟು ಹೋಗುವಂತೆ ಮನವಿ ಮಾಡಿ ಹೋಗುತ್ತಾಳೆ , ನಂತರ ಹರ್ಷ ಮನೆಗೆ ಬಂದು ಭುವಿಯನ್ನು ಹೊರಗೆ ಕರೆದುಕೊಂಡು ಹೋಗಲು ತೀರ್ಮಾನಿಸುತ್ತಾನೆ ಆದರೆ ಅವರಿಬ್ಬರು ಮನೆಯಿಂದ ಹೊರಗೆ ಹೋಗುವಾಗ ಯಾರು ಇಲ್ಲದ ಮನೆಯ ಬಾಗಿಲನ್ನು ಹಾಕುವುದನ್ನೇ ಮರೆಯುತ್ತಾರೆ ಗಡಿಬಿಡಿಯಲ್ಲಿ ಹೀಗೂ ಉಂಟೆ?

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು